

‘ಡೇರ್‌ಡೆವಿಲ್ ಮುಸ್ತಾಫಾ’ ಸಿನಿಮಾ ಮೂಲಕ ಬೆಳಕಿಗೆ ಬಂದ ರಂಗಭೂಮಿ ಪ್ರತಿಭೆ ಆದಿತ್ಯ ಆಶ್ರೀ ಅವರಿಗೆ ಜನರ ಮನಸ್ಸನ್ನು ಕಾಡುವಂಥ ಪಾತ್ರಗಳಲ್ಲಿ ಕಾಣಿಸಿಕೊಳ್ಳಬೇಕೆಂಬ ತುಡಿತ. ರಂಗಭೂಮಿಯ ಸಾಂಗತ್ಯದಲ್ಲಿ ನಟನೆಯ ವ್ಯಾಕರಣ ಅರಿತುಕೊಂಡ ಅವರು ಅಭಿನಯದೊಂದಿಗೆ ನಿರ್ದೇಶನದತ್ತಲೂ ಹೆಜ್ಜೆ ಇಡುತ್ತಿದ್ದಾರೆ.

# ಕಾಡುವ ಪಾತ್ರಗಳ ಕನವರಿಕೆಯಲ್ಲಿ ಆದಿತ್ಯ ಆಶ್ರೀ

■ ಸುಮಲತಾ ಎನ್.

‘ಡೇರ್‌ಡೆವಿಲ್ ಮುಸ್ತಾಫಾ’ ಸಿನಿಮಾದಲ್ಲಿ ರಾಮಾನುಜ ಅಯ್ಯಂಗಾರಿಯಾಗಿ ವಿಭಿನ್ನ ಮ್ಯಾನರಿಸಂನಿಂದ ಗಮನಸೆಳೆದಿದ್ದ ನಟ ಆದಿತ್ಯ ಆಶ್ರೀ, ಮಾಸ್ ಸಿನಿಮಾದಲ್ಲಿಯೂ ಛಾಪು ಮೂಡಿಸಲು ಹೊರಟಿದ್ದಾರೆ. ಕೆ.ಎಂ. ಚೈತನ್ಯ ನಿರ್ದೇಶನದ ‘ಬಲರಾಮನ ದಿನಗಳು’ ಸಿನಿಮಾದಲ್ಲಿ ‘ಸಿಂಗ್ಲಿ’ಯಾಗಿ ಹೊಸ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ಆದಿತ್ಯ ಶಿವಮೊಗ್ಗದ ಹುಡುಗ. ಪಿಯುಸಿ ನಂತರ ಬೆಂಗಳೂರಿಗೆ ಕಾಲಿಟ್ಟ ಅವರ ಮನಸ್ಸು ಓದಿಗಿಂತ ಹೆಚ್ಚು ವಾಲುತ್ತಿದ್ದುದು ನಟನೆಯತ್ತಲೇ. ಆದರೂ ಅಪ್ಪ ಅಮ್ಮನ ಕಾರಣಕ್ಕೆ ಎಂ.ಕಾಂ. ಮುಗಿಸಿದ್ದೇ, ರಂಗಭೂಮಿಯತ್ತ ಹಾದಿ ಹೊರಳಿಸಿದರು. ಅಲ್ಲಿ ಏಳು ವರ್ಷ ಸಂಪೂರ್ಣ ತಮ್ಮನ್ನು ತೊಡಗಿಸಿಕೊಂಡು ಸಿನಿಮಾರಂಗದತ್ತ ಮುಖ ಮಾಡಿದರು.

ಆದಿತ್ಯ ಅವರಲ್ಲಿ ನಟಿಸಬೇಕೆಂಬ ಆಸೆ ಚಿಗುರಿದ್ದರ ಹಿಂದೆ ಒಂದು ಪುಟ್ಟ ಕಥೆಯೂ ಇದೆ. ಅದನ್ನು ಅವರೇ ವಿವರಿಸುವುದು ಹೀಗೆ...

“7ನೇ ತರಗತಿಯಲ್ಲಿದ್ದಾಗ ‘ಎದೆ ತುಂಬಿ ಹಾಡುವೆನು’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ನಮ್ಮ ಮನೆಯವರಿಗೆ ನಾನು ಗಾಯನದಲ್ಲಿ ಹೆಸರು ಮಾಡಬೇಕೆಂಬ ಆಸೆ. ನಾನು ಹಾಡಿದ ನಂತರ ಕಾರ್ಯಕ್ರಮ ನಡೆಸಿಕೊಡುತ್ತಿದ್ದ ಎಸ್.ಪಿ. ಬಾಲಸುಬ್ರಮಣ್ಯಂ ಅವರು ನನ್ನ ಭಾವಾಭಿವ್ಯಕ್ತಿಯನ್ನು ನೋಡಿ, ‘ನೀನು ಹಾಡುಗಾರ ಆಗ್ತೀಯೋ ಇಲ್ಲವೋ, ಆದರೆ ಒಳ್ಳೆಯ ನಟ ಆಗ್ತೀಯಪ್ಪ’ ಎಂದು ನಕ್ಕಿದ್ದರು. ಆ ಮಾತು ನನ್ನನ್ನು ನಟನೆಯತ್ತ ಸಣ್ಣದಾಗಿ ಸೆಳೆದಿತ್ತು. ನನ್ನ ನಟನೆ ಮತ್ತೊಬ್ಬರ ಗಮನಸೆಳೆಯಿತು ಎಂಬ ಅಂಶವೇ ನಾನ್ಯಾಕೆ ನಟನೆ ಮಾಡಬಾರದು ಎನ್ನುವ ಆಲೋಚನೆಯನ್ನೂ ಹುಟ್ಟುಹಾಕಿತು...’.

ಮುಂದೆ ಏನು ಮಾಡಬೇಕು? ನಟನೆಯಲ್ಲಿ ಹೇಗೆ ಪರಿಣತಿ ಗಳಿಸಬೇಕು? ಎಂಬಿತ್ಯಾದಿ ಪ್ರಶ್ನೆಗಳನ್ನಿಟ್ಟುಕೊಂಡೇ ಪಿಯುಸಿ ಮುಗಿಸಿದ ಆದಿತ್ಯ, ಬೆಂಗಳೂರಿನ ದಾರಿ ಬೆಳೆಸಿದರು.

‘ನಮ್ಮದು ಸಿನಿಮಾ ಹಿನ್ನೆಲೆಯಿಲ್ಲದ ಮಧ್ಯಮ ವರ್ಗದ ಕುಟುಂಬ. ನಟನೆಗೆ ಬರಬೇಕೆಂದರೆ ಭದ್ರ ಅಡಿಪಾಯ ಹಾಕಿಕೊಳ್ಳಲೇಬೇಕಿತ್ತು. ಇದೇ ಆಲೋಚನೆಯಲ್ಲಿ ಹಲವು ಕಲಾವಿದರನ್ನು ಗಮನಿಸುತ್ತಿದ್ದೆ. ದೊಡ್ಡ ದೊಡ್ಡ ಕಲಾವಿದರ ಹಿನ್ನೆಲೆ ರಂಗಭೂಮಿಯೇ ಆಗಿದ್ದುದು ನನ್ನಲ್ಲಿ ಕುತೂಹಲ ಉಂಟುಮಾಡಿತ್ತು. ಕೋಟ್ಯಂತರ ಜನರ ನಾಡಿಮಿಡಿತ ಹಿಡಿಯಬೇಕು ಎಂದರೆ ನಟನೆಗೆ ಒಂದು ವ್ಯಾಕರಣ ಇರುತ್ತದೆ. ಆ ವ್ಯಾಕರಣವನ್ನು ನಾನೂ ಕಲಿಯಬೇಕು ಎಂದು ರಂಗಭೂಮಿಯತ್ತ ನಡೆದೆ’ ಎಂದು ಮೆಲುಕು ಹಾಕುತ್ತಾರೆ ಆದಿತ್ಯ.

‘ವಿಜಯನಗರ ಬಿಂಬ’ದಲ್ಲಿ ಡಿಪ್ಲೊಮಾ ಇನ್ ಥಿಯೇಟರ್ ಮಾಡಿ, ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾದಲ್ಲಿ ಸುರೇಶ್ ಆನಗಳ್ಳಿ ಅವರ ಬಳಿಯೂ ತರಬೇತಿ ಪಡೆದ ಆದಿತ್ಯ ‘ಸ್ಪೈಡ್ ವಿಂಗ್’ ಸಂಸ್ಥೆಯಲ್ಲಿ ಹಲವು ನಾಟಕಗಳನ್ನು ಮಾಡಿದರು. ಕೇರಳಕ್ಕೆ ಹೋಗಿ ಕಳರಿಪಯಟ್ಟು ಮೂಲ ತರಬೇತಿ ಪಡೆದುಕೊಂಡು ಮುಂಬೈ ಫಿಲ್ಮ್ ಸಿಟಿಯಲ್ಲಿ ಮೂರು ತಿಂಗಳು ಇಂಟೆನ್ಸ್ ಆ್ಯಕ್ಟಿಂಗ್ ವರ್ಕ್‌ಶಾಪ್‌ನಲ್ಲಿಯೂ ಭಾಗವಹಿಸಿದರು.